# ಎನ್‌ಐಟಿಕೆ: ಮಾ.16-19: 'ಇನ್ಸಿಡೆಂಟ್ 2023'

**ಮಂಗಳೂರು:** ಸುರತ್ಕಲ್ ಎನ್‌ಐಟಿಕೆ ವಾರ್ಷಿಕ ಸಾಂಸ್ಕೃತಿಕ ಉತ್ಸವ 'ಇನ್ಸಿಡೆಂಟ್ 2023' ಮಾ.16ರಿಂದ 19ರವರೆಗೆ ಎನ್‌ಐಟಿಕೆಯಲ್ಲಿ ನಡೆಯಲಿದೆ.

ಮಾ.16ಕ್ಕೆ ಸಂಜೆ 6ಕ್ಕೆ ಉದ್ಘಾಟನಾ ಸಮಾರಂಭ ನಡೆಯಲಿದೆ. ನಟ ಪ್ರಕಾಶ್ ಬೆಳವಾಡಿ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಶಾಂತ್ ಎ. ತಿಮ್ಮಯ್ಯ, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ತುಳಸಿ ಗೌಡ ಭಾಗವಹಿಸುವರು. ಎನ್‌ಐಟಿಕೆ ಸುರತ್ಕಲ್ ಪ್ರಭಾರ ನಿರ್ದೇಶಕ ಪ್ರೊ. ಪ್ರಸಾದ್ ಕೃಷ್ಣ ಅಧ್ಯಕ್ಷತೆ ವಹಿಸುವರು ಎಂದು ಎನ್‌ಐಟಿಕೆ ವಿದ್ಯಾರ್ಥಿ ಕ್ಷೇಮಪಾಲನಾ ಡೀನ್ ಪ್ರೊ. ನರೇಂದ್ರನಾಥ್ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಉದ್ಘಾಟನಾ ಸಮಾರಂಭದ ಬಳಿಕ ಹಾಸ್ಯ ಕಲಾವಿದೆ ಗುರ್ಲೀನ್ ಪನ್ನು ಅವರಿಂದ ಸ್ಟ್ಯಾಂಡ್‌ಅಪ್ ಕಾಮಿಡಿ ಶೋ ನಡೆಯಲಿದೆ. ಮಾ.17ಕ್ಕೆ 'ಇನ್ ಟಾಕ್ಸ್' ಕಾರ್ಯಕ್ರಮದಲ್ಲಿ ಬೆಂಗಳೂರಿನ ಮಾಜಿ ಪೊಲೀಸ್ ಕಮಿಷನರ್ ಶಂಕರ್ ಬಿದರಿ, ಅರೆಕಾನಟ್ ಸಂಸ್ಥಾಪಕ ನಿವೇದನ್ ನೆಂಪೆ ಭಾಷಣ ಮಾಡುವರು. ಇನ್ಸಿಡೆಂಟ್ 2023ರಲ್ಲಿ ಫ್ಯಾಶನ್ ಸ್ಪರ್ಧೆ, ಫ್ಯೂಶನ್ ನೈಟ್, ಡಿಜೆ ನೈಟ್, ಸಂಗೀತ, ನೃತ್ಯ, ಸಾಹಿತ್ಯ, ಕ್ರೀಡೆ, ಫ್ಯಾಶನ್, ವ್ಯಾಪಾರ, ಗೇಮಿಂಗ್, ನಾಟಕ ಸಹಿತ 50ಕ್ಕೂ ಹೆಚ್ಚು ಸ್ಪರ್ಧೆ ಏರ್ಪಡಿಸಲಾಗಿದೆ. 200ಕ್ಕೂ ಹೆಚ್ಚು ಕಾಲೇಜುಗಳಿಂದ ಸ್ಪರ್ಧಿಗಳು ಭಾಗವಹಿಸುವರು ಎಂದರು. ಎನ್‌ಐಟಿಕೆ ಸ್ಟೂಡೆಂಟ್ ಆ್ಯಕ್ಟಿವಿಟಿ ಮತ್ತು ಕ್ರೀಡಾ ಅಧಿಕಾರಿ ಡಾ. ಮನೋಜ್, ಪಿಆರ್‌ಒ ವೈಷ್ಣವಿ, ಇನ್ಸಿಡೆಂಟ್ ಸಂಚಾಲಕ ಸೂರ್ಯಕೌಶಿಕ್ ಬಿ.ಎನ್. ಉಪಸ್ಥಿತರಿದ್ದರು.

Hosa digantha, Date: 15/03/23 p, no- 14